ಕರ್ನಾಟಕ ಸರ್ಕಾರ

**Government of Karnataka**

# ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ (DPA)

# 2020–21 ನೇ ಸಾಲಿನ ವಾರ್ಷಿಕ ವರದಿ

## ದಿನಾಂಕ: 01/04/2020 ರಿಂದ 31/03/2021 ರವರೆಗೆ


ವಿಳಾಸ : ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೋಲಿಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ – 561203

ಇ–ಮೇಲ್: dpa.dbpura2018@gmail.com

ಜಾಲತಾಣ: 1) www.dbpurapa.in

2) www.doddaballapur.tpa.gov.in

# ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

## 2020-21 ನೇ ಸಾಲಿನ ವಾರ್ಷಿಕ ವರದಿ

### (ದಿನಾಂಕ: 01-04-2020 ರಿಂದ 31-03-2021 ರವರೆಗೆ)

### 1. ಪೀಠಿಕೆ:

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರವು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 4 (ಸಿ) ರ ಅಡಿಯಲ್ಲಿ ಸರ್ಕಾರದ ಅಧಿಸೂಚನೆ ಸಂ: ನಅಇ-95-ಬಿಎಂಆರ್-2016 ದಿನಾಂಕ: 20.03.2018 ರ ಅಡಿಯಲ್ಲಿ ಸ್ಥಾಪಿತವಾದ ಶಾಸನಬದ್ಧ ಯೋಜನಾ ಪ್ರಾಧಿಕಾರವಾಗಿರುತ್ತದೆ. ದಿನಾಂಕ: 11.05.2018 ರಿಂದ ಕಾರ್ಯಾರಂಭ ಮಾಡಿದ್ದು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಕಛೇರಿ, ನಂ. 1, ಆಲಿ ಆಸ್ಕರ್ ರಸ್ತೆ, ಬೆಂಗಳೂರು ಇಲ್ಲಿ ಕಾರ್ಯನಿರ್ವಹಿಸಲಾಗುತ್ತಿತ್ತು. ಪ್ರಸ್ತುತ ದಿ: 05-09-2019 ರಿಂದ ಎಸ್.ಎಸ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೋಲಿಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ ಇಲ್ಲಿನ ಬಾಡಿಗೆ ಕಟ್ಟಡಕ್ಕೆ ಸ್ಥಳಾಂತರಿಸಿ ಕಾರ್ಯ ನಿರ್ವಹಿಸಲಾಗುತ್ತಿದೆ. ಪ್ರಸ್ತುತ ಪ್ರಾಧಿಕಾರದ ಅಧ್ಯಕ್ಷರು ಕಛೇರಿಯ ಮುಖ್ಯಸ್ಥರಾಗಿದ್ದು, ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರ ದರ್ಜೆಯ ಅಧಿಕಾರಿಯು ಈ ಪ್ರಾಧಿಕಾರದ ಸದಸ್ಯ-ಕಾರ್ಯದರ್ಶಿಗಳಾಗಿದ್ದು, ಪ್ರಾಧಿಕಾರದ ಎಲ್ಲಾ ಕಾರ್ಯಚಟುವಟಿಕೆಗಳ ಸಂಬಂಧ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ.

### 1.1 ಉದ್ದೇಶ ಮತ್ತು ಕಾರ್ಯಚಟುವಟಿಕೆಗಳು:-

ಸ್ಥಳೀಯ ಯೋಜನಾ ಪ್ರದೇಶದಲ್ಲಿ ವಿವಿಧ ಭೂ ಉಪಯೋಗಗಳ ಯೋಜಿತ ಬೆಳವಣಿಗೆ ಮತ್ತು ಅಭಿವೃದ್ಧಿಪಡಿಸುವಿಕೆ ಭೌತಿಕ, ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆಯೊಂದಿಗೆ ದೂರ ದೃಷ್ಟಿಕೋನ ವಹಿಸಿ ಮಹಾಯೋಜನೆ ತಯಾರಿಸುವುದು. ಹಾಗೂ ನಗರ ಯೋಜನೆ ಸ್ಕೀಮ್‌ಗಳನ್ನು ರೂಪಿಸಿ ಅನುಷ್ಠಾನಗೊಳಿಸುವುದು.

- ಸ್ಥಳೀಯ ಯೋಜನಾ ಪ್ರದೇಶದಲ್ಲಿನ ಜನತೆಗೆ ನಾಗರೀಕ ಮತ್ತು ಸಾಮಾಜಿಕ ಸೌಕರ್ಯಗಳನ್ನು ಒದಗಿಸುವ ಸಲುವಾಗಿ ನಗರ ಮತ್ತು ಗ್ರಾಮಾಂತರ ಪ್ರದೇಶಗಳ ಯೋಜನೆ ಮತ್ತು ಮಹಾಯೋಜನೆಗಾಗಿ ಸೂಕ್ತ ಪೂರಕ ವಾತಾವರಣವನ್ನು ಕಲ್ಪಿಸುವುದು.
- ಲಾಭ ಮತ್ತು ಸ್ಪಷ್ಟ ವ್ಯಾಪಾರ ಉದ್ದೇಶದ ಅನಿಯಂತ್ರತ ಭೂ ಅಭಿವೃದ್ಧಿಯನ್ನು ತಡೆಗಟ್ಟುವುದು.
- ಭೂಮಿಯ ಸಮತೋಲಿತ ಬಳಕೆಗಾಗಿ ಹಾಲಿ ವಿಹಾರ, ನಾಗರೀಕ ಸೌಕರ್ಯಗಳನ್ನು ಮತ್ತು ಇತರೆ ಸವಲತ್ತುಗಳನ್ನು ಸಂರಕ್ಷಿಸುವುದು ಮತ್ತು ಅಭಿವೃದ್ಧಿಪಡಿಸುವುದು.
- ಸ್ಥಳೀಯ ಯೋಜನಾ ಪ್ರದೇಶದಲ್ಲಿನ ಜನಜೀವನ ಮಟ್ಟವನ್ನು ಸುಧಾರಿಸುವಲ್ಲಿ ಅಪೇಕ್ಷಿತ ಗುಣಮಟ್ಟದ ಪರಿಸರ, ಆರೋಗ್ಯ ಮತ್ತು ನೈರ್ಮಲ್ಯ ಸಹಿತ ಕೈಗಾರಿಕೆ ಮತ್ತು ವಾಣಿಜ್ಯ ಚಟುವಟಿಕೆಗಳ ಕ್ರಮಬದ್ಧ ಬೆಳವಣಿಗೆ ದೃಷ್ಠಿಕೋನದೊಂದಿಗೆ ಜನವಸತಿ ಪ್ರದೇಶಗಳ ಭವಿಷ್ಯತ ಬೆಳವಣಿಗೆಯನ್ನು ನಿರ್ದೇಶಿಸುವುದು.

## 2. ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದ *ಆಡಳಿತಾತ್ಮಕ ರಚನೆ :-*

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ–95–ಬಿಎಂಆರ್–2016 ದಿನಾಂಕ: 20.03.2018 ರಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 4(ಸಿ) ರಂತೆ ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರವನ್ನು ರಚಿಸಲಾಗಿದೆ. ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರನ್ನು ಅಧ್ಯಕ್ಷರನ್ನಾಗಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಇವರನ್ನು ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯನ್ನಾಗಿ ನೇಮಿಸಲಾಗಿರುತ್ತದೆ ಮತ್ತು ನಗರಸಭೆ ಪೌರಾಯುಕ್ತರು, ದೊಡಬಳ್ಳಾಪುರ ಇವರನ್ನು ಪ್ರಾಧಿಕಾರದ ಸದಸ್ಯರನ್ನಾಗಿ ನೇಮಿಸಲಾಗಿದೆ. ಪ್ರಸ್ತುತ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 20 ಬಿಎಂಆರ್ 2020 ದಿನಾಂಕ: 11–03–2020 ರಂದು ಶ್ರೀ ಡಿ.ಎಸ್. ಜಯಣ್ಣ ಬಿನ್ ಎಂ. ಸಂಜೀವಯ್ಯ, ಯಲಹಂಕ ತಾಲ್ಲೂಕು, ಹೆಸರಘಟ್ಟ ಹೋಬಳಿ, ಸಿಂಗನಾಯಕನಹಳ್ಳಿ ಗ್ರಾಮ ಪಂಚಾಯ್ತಿ, ದಿಬ್ಬೂರು ಗ್ರಾಮ ರವರನ್ನು ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ನೇಮಿಸಿ ಆದೇಶಿಸಿದೆ ಹಾಗೂ ಶ್ರೀ ಆರ್. ಆನಂದಮೂರ್ತಿ ಬಿನ್ ಲೇಟ್॥ ಎ.ವಿ. ರಾಮಯ್ಯ, ಮಧುರೆ ಹೋಬಳಿ, ಮಧುರೆ ಗ್ರಾಮ ದೊಡ್ಡಬಳ್ಳಾಪುರ ತಾಲ್ಲೂಕು ಮತ್ತು ಶ್ರೀ ಎಸ್.ಕೆ. ರಮೇಶ್ ಬಿನ್ ಎಸ್.ಜಿ. ಕೃಷ್ಣಮೂರ್ತಿ, ಕರೇನಹಳ್ಳಿ, ವಾರ್ಡ್ ನಂ. 30, ದೊಡ್ಡಬಳ್ಳಾಪುರ ನಗರ ರವರುಗಳನ್ನು ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದ ಸದಸ್ಯರುಗಳನ್ನಾಗಿ ನೇಮಕ ಮಾಡಿ ಆದೇಶಿಸಿದೆ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 20 ಬಿಎಂಆರ್ 2020 ದಿನಾಂಕ: 19–02–2021 ರಂದು ಶ್ರೀಮತಿ ಎಂ.ಕೆ. ವತ್ಸಲ ಕೋಂ ಬಿ.ಪಿ. ಜಗನ್ನಾಥ, ನಂ. 642, 13ನೇ ಅಡ್ಡರಸ್ತೆ, ಕೊಂಗಾಡಿಯಪ್ಪ ಕಾಲೇಜು ರಸ್ತೆ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರನ್ನು ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದ ಸದಸ್ಯರನ್ನಾಗಿ ನೇಮಕ ಮಾಡಿ ಆದೇಶಿಸಿದೆ. ಅದರಂತೆ, ಶ್ರೀ ಡಿ.ಎಸ್. ಜಯಣ್ಣ ಬಿನ್ ಎಂ. ಸಂಜೀವಯ್ಯ ರವರು ದಿನಾಂಕ: 13–03–2020 ರಂದು ಪ್ರಾಧಿಕಾರದ ಅಧ್ಯಕ್ಷರ ಪ್ರಭಾರವನ್ನು ವಹಿಸಿಕೊಂಡು ಕಾರ್ಯ ನಿರ್ವಹಿಸುತ್ತಿರುತ್ತಾರೆ. ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು, ಪ್ರಾಧಿಕಾರದ ಎಲ್ಲಾ ಕಾರ್ಯ ಚಟುವಟಿಕೆಗಳ ಸಂಬಂಧ ಕಾರ್ಯನಿರ್ವಹಣಾಧಿಕಾರಿಗಳಾಗಿ ಕಾರ್ಯ ನಿರ್ವಹಿಸುತ್ತಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 44 ಬಿಎಂಆರ್ 2018, ಬೆಂಗಳೂರು ದಿನಾಂಕ: 20.06.2019 ರ ಸರ್ಕಾರದ ಆದೇಶದಲ್ಲಿ ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದ ಕರ್ತವ್ಯ ನಿರ್ವಹಣೆಗೆ ಈ ಕೆಳಗಿನ ತಾತ್ಕಾಲಿಕ ಹುದ್ದೆಗಳನ್ನು ಸೃಜಿಸಿ ಅನುಮೋದನೆ ನೀಡಲಾಗಿರುತ್ತದೆ.

| ಕ್ರ.ಸಂ | ಹುದ್ದೆಯ ಪದನಾಮ | ವೇತನ ಶ್ರೇಣಿ | ತಾತ್ಕಾಲಿಕವಾಗಿ ಸೃಜಿಸಲು ಸಹಮತಿ ನೀಡಿರುವ ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ |
|---|---|---|---|---|
| 1 | ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು | 52650–97100 | 01 | ನಿಯೋಜನೆ |
| 2 | ನಗರ ಯೋಜಕರು | 43100–83900 | 01 | |
| 3 | ಪ್ರಥಮ ದರ್ಜೆ ಸಹಾಯಕರು | 27650–52650 | 01 | |
| 4 | ದ್ವಿತೀಯ ದರ್ಜೆ ಸಹಾಯಕರು | 21400–42000 | 01 | |
| 5 | ಬೆರಳಚ್ಚುಗಾರರು | | 01 | ಹೊರಗುತ್ತಿಗೆ |

| | | | | |
|---|---|---|---|---|
| 6 | ದಲಾಯತ್ | | 01 | ಹೊರಗುತ್ತಿಗೆ |
| | **ಒಟ್ಟು** | | **06** | |

ಮೇಲಿನಂತೆ ಕ್ರ.ಸಂ. (1) ಮತ್ತು (2) ಸಿಬ್ಬಂದಿಗಳನ್ನು ಸರ್ಕಾರದಿಂದ ನಿಯೋಜಿಸಲಾಗಿದ್ದು, ಬಾಕಿ ಉಳಿದ ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಪಡೆಯಲಾಗಿರುತ್ತದೆ.

ಪ್ರಾಧಿಕಾರವು ವಿಸ್ತಾರವಾದ ಎಲ್ಲೆಯ ಪ್ರದೇಶವನ್ನು ಹೊಂದಿದ್ದು, ಪ್ರಸ್ತುತ ಶೀಘ್ರವಾಗಿ ಮಹಾಯೋಜನೆ ತಯಾರಿಸಿ, ಸರ್ಕಾರದ ಅನುಮೋದನೆಗಾಗಿ ಸಲ್ಲಿಸಬೇಕಾಗಿದ್ದು ಹಾಗೂ ಮತ್ತಿತ್ತರ ತಾಂತ್ರಿಕ ಕೆಲಸಗಳು ಆರ್.ಟಿ.ಐ ಮತ್ತು ಇತರೆ ಕೆಲಸಗಳನ್ನು ನಿಗಧಿತ ಅವಧಿಯಲ್ಲಿ ಪರಿಣಾಮಕಾರಿಯಾಗಿ ನಿರ್ವಹಿಸಲು ಈ ಕೆಳಕಂಡ ಹೆಚ್ಚುವರಿ ಹುದ್ದೆಗಳನ್ನು ಸೃಜಿಸಲು ಪ್ರಾಧಿಕಾರದ ಪತ್ರ ಸಂಖ್ಯೆ: ದೊಯೋಪ್ರಾ/ಟಿಪಿ/ಹುದ್ದೆಗಳು/23/2018–19/580 ದಿನಾಂಕ: 01–12–2020 ರಲ್ಲಿ ಮಹಾನಗರ ಆಯುಕ್ತರ ಮೂಲಕ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.

| ಕ್ರಸಂ | ಹುದ್ದೆಯ ಪದನಾಮ | ವೇತನ ಶ್ರೇಣಿ | ತಾತ್ಕಾಲಿಕವಾಗಿ ಸೃಜಿಸಲು ಸಹಮತಿ ನೀಡಬೇಕಾಗಿರುವ ಹುದ್ದೆಗಳ ಸಂಖ್ಯೆ |
|---|---|---|---|
| 1 | ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು | 67550–104600 | 01 |
| 2 | ನಗರ ಯೋಜಕರು | 43100–83900 | 01 |
| 3 | ಸಹಾಯಕ ನಗರ ಯೋಜಕರು | 33450–62600 | 01 |
| 4 | ಬೆರಳಚ್ಚುಗಾರರು | | 01 |
| 5 | ದಲಾಯತ್ | | 01 |
| | **ಒಟ್ಟು** | | **05** |


## 2.1 ಕಾರ್ಯವ್ಯಾಪ್ತಿ– ಸ್ಥಳೀಯ ಯೋಜನಾ ಪ್ರದೇಶ

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಸ್ಥಳೀಯ ಯೋಜನಾ ಪ್ರದೇಶ ವ್ಯಾಪ್ತಿಯಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ, ದೊಡ್ಡಬೆಳವಂಗಲ, ಸಾಸಲು, ಮಧುರೆ ಹೋಬಳಿ ಹಾಗೂ ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಹೆಸರಘಟ್ಟ ಹೋಬಳಿ ಯಿಂದ 257 ಗ್ರಾಮಗಳನ್ನು ಮತ್ತು ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಮಧುರೆ ಹೋಬಳಿಯ 37 ಗ್ರಾಮಗಳನ್ನು ಒಟ್ಟು 294 ಗ್ರಾಮಗಳನ್ನು ಸರ್ಕಾರದ ಅಧಿಸೂಚನೆ–1 ಸಂಖ್ಯೆ: ನಅಇ–95–ಬಿಎಂಆರ್–2016 ದಿನಾಂಕ: 30.11.2017ರಲ್ಲಿ ಹಿಂತೆಗೆದುಕೊಂಡು ದೊಡ್ಡಬಳ್ಳಾಪುರ ಸ್ಥಳೀಯ ಯೋಜನಾ ಪ್ರದೇಶಕ್ಕೆ ವರ್ಗಾಯಿಸಲಾಗಿದೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 4(ಎ) ರಂತೆ ಸರ್ಕಾರದ ಅಧಿಸೂಚನೆ–II ಸಂಖ್ಯೆ: ನಅಇ–95–ಬಿಎಂಆರ್–2016 ದಿನಾಂಕ: 30.11.2017 ರಲ್ಲಿ 294 ಗ್ರಾಮಗಳನ್ನೊಳ –

ಗೊಂಡಂತೆ ದೊಡ್ಡಬಳ್ಳಾಪುರ ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಲಾಗಿದ್ದು, ಸದರಿ ಸ್ಥಳೀಯ ಯೋಜನಾ ಪ್ರದೇಶದಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕಿನ 265 ಗ್ರಾಮಗಳು ಮತ್ತು ಬೆಂಗಳೂರು ಉತ್ತರ (ಅಪರ) ತಾಲ್ಲೂಕಿನ 29 ಗ್ರಾಮಗಳನ್ನು ಒಳಗೊಂಡಂತೆ ಒಟ್ಟು 294 ಗ್ರಾಮಗಳು ಇದ್ದು, ಸದರಿ ಸ್ಥಳೀಯ ಯೋಜನಾ ಪ್ರದೇಶದ ವಿಸ್ತೀರ್ಣವು 77,277.0 ಹೆಕ್ಟೇರ್ ಇರುತ್ತದೆ. (772.77 ಚ.ಕಿ.ಮೀ.)

**<u>ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವಿವರಗಳು.</u>**



**ದೊಡ್ಡಬಳ್ಳಾಪುರ ಯೋಜನಾ ಪ್ರದೇಶದಲ್ಲಿ ಬರುವ ಗ್ರಾಮಗಳು/ನಗರಗಳ ವಿವರ ಕೆಳಕಂಡಂತಿದೆ.**

| ಕ್ರಸಂ | ಗ್ರಾಮ/ನಗರಗಳು | ಸಂಖ್ಯೆ/ವಿಸ್ತೀರ್ಣ |
|---|---|---|
| ಬೆಂಗಳೂರು ಗ್ರಾಮಾಂತರ ಜಿಲ್ಲೆ–ದೊಡ್ಡಬಳ್ಳಾಪುರ ತಾಲ್ಲೂಕು | | |
| 1 | ದೊಡ್ಡಬಳ್ಳಾಪುರ ನಗರಸಭೆ ವ್ಯಾಪ್ತಿ | 67.00 ಚ.ಕಿ.ಮೀ. |
| 2 | ದೊಡ್ಡಬಳ್ಳಾಪುರ ಕಸಬಾ ಹೋಬಳಿ | 54 ಗ್ರಾಮಗಳು |
| 3 | ದೊಡ್ಡಬೆಳವಂಗಲ ಹೋಬಳಿ | 43 ಗ್ರಾಮಗಳು |
| 4 | ಸಾಸಲು ಹೋಬಳಿ | 58 ಗ್ರಾಮಗಳು |
| 5 | ತೂಬಗೆರೆ ಹೋಬಳಿ | 67 ಗ್ರಾಮಗಳು |
| 6 | ಮಧುರೆ ಹೋಬಳಿ | 42 ಗ್ರಾಮಗಳು |

| ಬೆಂಗಳೂರು ನಗರ ಜಿಲ್ಲೆ–ಬೆಂಗಳೂರು ಉತ್ತರ ತಾಲ್ಲೂಕು | | |
|---|---|---|
| 1 | ಹೆಸರುಘಟ್ಟ ಹೋಬಳಿ | 29 ಗ್ರಾಮಗಳು |

ದೊಡ್ಡಬಳ್ಳಾಪುರ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನ 265 ಗ್ರಾಮಗಳು ಮತ್ತು ಬೆಂಗಳೂರು ಉತ್ತರ (ಅಪರ) ತಾಲ್ಲೂಕಿನ 29 ಗ್ರಾಮಗಳನ್ನು ಒಳಗೊಂಡಂತೆ ಒಟ್ಟು 294 ಗ್ರಾಮಗಳು ಇರುತ್ತದೆ. ಸದರಿ ಯೋಜನಾ ಪ್ರದೇಶದ ಉತ್ತರಕ್ಕೆ ಗೌರಿಬಿದನೂರು ತಾಲ್ಲೂಕು, ದಕ್ಷಿಣಕ್ಕೆ ನೆಲಮಂಗಲ ಹಾಗೂ ಬೆಂಗಳೂರು ಉತ್ತರ ತಾಲ್ಲೂಕು, ಪೂರ್ವಕ್ಕೆ ದೇವನಹಳ್ಳಿ ಹಾಗೂ ಚಿಕ್ಕಬಳ್ಳಾಪುರ ತಾಲ್ಲೂಕು ಮತ್ತು ಪಶ್ಚಿಮಕ್ಕೆ ಕೊರಟಗೆರೆ ತಾಲ್ಲೂಕುಗಳು ಎಲ್ಲೆಯಾಗಿರುತ್ತದೆ. ದೊಡ್ಡಬಳ್ಳಾಪುರ ಪಟ್ಟಣವು ಬೆಂಗಳೂರಿನಿಂದ 50 ಕಿ.ಮೀ. ದೂರದಲ್ಲಿದ್ದು, ದೊಡ್ಡಬಳ್ಳಾಪುರ ಸ್ಥಳೀಯ ಯೋಜನಾ ಪ್ರದೇಶದಲ್ಲಿ ರಾಷ್ಟ್ರೀಯ ಹೆದ್ದಾರಿ 207, ರಾಜ್ಯ ಹೆದ್ದಾರಿ 9, ರಾಜ್ಯ ಹೆದ್ದಾರಿ–74, ರಾಜ್ಯ ಹೆದ್ದಾರಿ–94 ಹಾಗೂ ರಾಜ್ಯ ಹೆದ್ದಾರಿ–39 ಗಳು ಹಾದು ಹೋಗುತ್ತದೆ.

**2.2 ಆಡಳಿತಾತ್ಮಕ ವೆಚ್ಚ :–** ಪ್ರಾಧಿಕಾರದ 2020–21 ನೇ ಸಾಲಿನ ದಿನಾಂಕ : 01–04–2020 ರಿಂದ 31–03–2021 ರವರೆಗಿನ ಅವಧಿಗೆ ವೆಚ್ಚಗಳ ವಿವರಗಳನ್ನು ಅನುಬಂಧ–2 ರಲ್ಲಿ ಲಗತ್ತಿಸಲಾಗಿದೆ.

## 2.3 ಅಂತರ್ಜಾಲ (Website):

ಯೋಜನಾ ಪ್ರಾಧಿಕಾರ ಕಾರ್ಯ ಚಟುವಟಿಕೆಗಳ ಕುರಿತು ಸಾರ್ವಜನಿಕ ಸಾಮಾನ್ಯ ತಿಳುವಳಿಕೆ ಸಲುವಾಗಿ ಒಂದು ಅಂತರ್ಜಾಲ (Website) ತೆರೆಯಲಾಗಿರುತ್ತದೆ. 1) www.dbpuratpa.gov.in 2) www.dbpurapa.gov.in ಈ ಅಂತರ್ಜಾಲದಲ್ಲಿ ಈ ಕೆಳಕಂಡಂತೆ ವಿವರಗಳಿರುತ್ತದೆ.

1. ಸಾಮಾನ್ಯ ಮಾಹಿತಿ
2. ಯೋಜನೆ
3. ಹಣಕಾಸು
4. ಲೆಕ್ಕಪರಿಶೋಧನೆ
5. ಕಾಯ್ದೆ ಹಾಗೂ ನಿಯಮಗಳು
6. ಸರ್ಕಾರದ ಅಧಿಸೂಚನೆ
7. ಟೆಂಡರ್ ಮತ್ತು ಶುಲ್ಕ
8. ತಾಂತ್ರಿಕ ಅಭಿಪ್ರಾಯ
9. ಪುನರಾವರ್ತಿತ ಪ್ರಶ್ನೆಗಳು
10. ಚಿತ್ರಗಳು
11. ಸಂಬಂಧಪಟ್ಟ ಕೊಂಡಿಗಳು

ಯೋಜನಾ ಪ್ರಾಧಿಕಾರದ ಅಂತರ್ಜಾಲ (Website) ದ ವಾರ್ಷಿಕ ನಿರ್ವಹಣೆಯನ್ನು ಕರ್ನಾಟಕ ಮುನಿಸಿಪಾಲ್ ಡೇಟಾ ಸೆಂಟರ್ ವತಿಯಿಂದ ನಿರ್ವಹಿಸಲಾಗುತ್ತಿರುತ್ತದೆ.

ಯೋಜನಾ ಪ್ರಾಧಿಕಾರದ ಇ-ಮೇಲ್ ಐಡಿ dpa.dbpur2018@gmail.com ಚಾಲ್ತಿಯಲ್ಲಿದ್ದು, ಸಾರ್ವಜನಿಕರು ತಮ್ಮ ಸಲಹೆ/ಕುಂದು ಕೊರತೆಗಳನ್ನು ಇ-ಮೇಲ್ ಮುಖಾಂತರ ಸಲ್ಲಿಸಬಹುದಾಗಿರುತ್ತದೆ.

## 3. ಕಾರ್ಯಪ್ರಗತಿ:

### 3.1] ಮಹಾಯೋಜನೆ ತಯಾರಿಕೆ:

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ 9(1) ರ ರೀತ್ಯ ಸ್ಥಳೀಯ ಯೋಜನಾ ಪ್ರದೇಶವು ಅಧಿಸೂಚನೆಯಾದ 02 ವರ್ಷಗಳ ಅವಧಿಯೊಳಗಾಗಿ ಯೋಜನಾ ಪ್ರಾಧಿಕಾರವು "ಮಹಾಯೋಜನೆ (Master Plan) ತಯಾರಿಸಿ, ಪ್ರಕಟಿಸಿ, ರಾಜ್ಯ ಸರ್ಕಾರದ ತಾತ್ಕಾಲಿಕ ಅನುಮೋದನೆಗಾಗಿ ಸಲ್ಲಿಸಬೇಕಾಗಿರುತ್ತದೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ 9(1) ರ ಅಡಿಯಲ್ಲಿ ಮಹಾಯೋಜನೆ ತಯಾರಿಕೆಗಾಗಿ ಸರ್ವೆ ಕಾರ್ಯ ಪ್ರಾರಂಭಿಸುವ ಪೂರ್ವದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 10ರ ಅಡಿಯಲ್ಲಿ ಮಹಾಯೋಜನೆ ತಯಾರಿಕೆಯ ಇಚ್ಛೆಯನ್ನು ಘೋಷಿಸಿ (Declaration of Intention of Making Master Plan), 60 ದಿನಗಳ ಅವಧಿಗೆ ಸಾರ್ವಜನಿಕ ಸಲಹೆಗಳನ್ನು ಆಹ್ವಾನಿಸಿ ಕರ್ನಾಟಕ ರಾಜ್ಯ ಪತ್ರ ಹಾಗೂ ಒಂದು ಅಥವಾ ಹೆಚ್ಚಿನ ದಿನಪತ್ರಿಕೆಗಳಲ್ಲಿ ಸಾರ್ವಜನಿಕ ಪ್ರಕಟಣೆಯನ್ನು ನೀಡಿ, ಮಹಾಯೋಜನೆ ತಯಾರಿಕೆ ಇಚ್ಛೆಯ ಪ್ರಕಟಣೆ, ಮಹಾಯೋಜನೆ ತಯಾರಿಸಬೇಕಾಗಿರುವ ಸ್ಥಳೀಯ ಯೋಜನಾ ಪ್ರದೇಶ ಎಲ್ಲೆಗಳ ವಿವರಗಳಿರುವ ನಕ್ಷೆ ಹಾಗೂ ಯೋಜನಾ ಪ್ರಾಧಿಕಾರದ ನಡವಳಿಕೆಯೊಂದಿಗೆ ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ.

ಮೇಲ್ಕಂಡ ಅಂಶಗಳಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 10 ರ ಅಡಿಯಲ್ಲಿ ಮಹಾಯೋಜನೆ ತಯಾರಿಕೆಯ ಇಚ್ಛೆಯನ್ನು ಘೋಷಿಸುವ ಬಗ್ಗೆ, ಕ್ರಮ ಜರುಗಿಸುವ ಕುರಿತು ದಿನಾಂಕ: 21.02.2019 ರಂದು ನಡೆದ ಯೋಜನಾ ಪ್ರಾಧಿಕಾರದ ಸಭೆಯಲ್ಲಿ ವಿಷಯವನ್ನು ಮಂಡಿಸಲಾಗಿ ಈ ಕೆಳಕಂಡಂತೆ ತೀರ್ಮಾನಿಸಲಾಗಿದೆ.

> "ದೊಡ್ಡಬಳ್ಳಾಪುರ ಸ್ಥಳೀಯ ಯೋಜನಾ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 9ರ ಅಡಿಯಲ್ಲಿ ಮಹಾಯೋಜನೆಯನ್ನು ತಯಾರಿಸುವ ಬಗ್ಗೆ, ಮಹಾಯೋಜನೆ ತಯಾರಿಕೆ ಇಚ್ಛೆಯ (Declaration of Intention of Making Master Plan) ಘೋಷಣೆಯನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ-10ರ ಅಡಿಯಲ್ಲಿ ಪ್ರಕಟಿಸಲು ತೀರ್ಮಾನಿಸಲಾಯಿತು."

ಯೋಜನಾ ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಮಹಾಯೋಜನೆ ತಯಾರಿಕೆಯ ಇಚ್ಛೆಯ ಘೋಷಣೆಯನ್ನು ಪ್ರಕಟಿಸಲು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 10 (1) ರಡಿ ಮಹಾಯೋಜನೆ ತಯಾರಿಕೆ ಇಚ್ಛೆಯನ್ನು ಕರ್ನಾಟಕ ರಾಜ್ಯ ಪತ್ರ ಸಂಪುಟ 154 ದಿನಾಂಕ: 16-05-2019 ಸಂಚಿಕೆ 20 ರಲ್ಲಿ 60 ದಿನಗಳ ಅವಧಿಗೆ ಸಾರ್ವಜನಿಕರ ಸಲಹೆಗಳನ್ನು ಆಹ್ವಾನಿಸಿ ಪ್ರಕಟಣೆ ನೀಡಲಾಗಿರುತ್ತದೆ.

ಮುಂದುವರೆದು, ಮಹಾಯೋಜನೆಯನ್ನು GIS ತಂತ್ರಾಂಶ ಬಳಸಿ ತಯಾರಿಸುವ ಉದ್ದೇಶ ಹೊಂದಿದ್ದು, ಈ ಸಂಬಂಧ ಕ್ರಮವಹಿಸಲಾಗುತ್ತಿದ್ದು, ಮೂಲ ನಕ್ಷೆ ತಯಾರಿಸಿ ಕಾಲೋಚಿತಗೊಳಿಸುವ ಕಾರ್ಯ ಪ್ರಗತಿ-ಯಲ್ಲಿರುತ್ತದೆ. ಸ್ಥಳೀಯ ಯೋಜನಾ ಪ್ರದೇಶದ ಬೆಳವಣಿಗೆ ಕೇಂದ್ರಗಳ ಪ್ರವೃತ್ತಿ ವಿಶ್ಲೇಷಣೆಯನ್ನೊಳಗೊಂಡಂತೆ ಸಮೀಕ್ಷೆ ಕಾರ್ಯ ಪ್ರಗತಿಯಲ್ಲಿರುತ್ತದೆ.

ದೊಡ್ಡಬಳ್ಳಾಪುರ ಸ್ಥಳೀಯ ಯೋಜನಾ ಪ್ರದೇಶಕ್ಕೆ ಮಹಾಯೋಜನೆ ತಯಾರಿಸುವ ಸಂಬಂಧ ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ ರವರಿಂದ ಸ್ಥಳೀಯ ಯೋಜನಾ ಪ್ರದೇಶದ ಮೂಲ ನಕ್ಷೆ ಪಡೆಯಲಾಗಿದ್ದು, ಸದರಿ ಮೂಲ ನಕ್ಷೆಯನ್ನು ಕಾಲೋಚಿತಗೊಳಿಸುವ ಕಾರ್ಯ ಪ್ರಗತಿಯಲ್ಲಿದೆ ಹಾಗೂ Geo-Referenced ಸ್ಥಳೀಯ ಯೋಜನಾ ಪ್ರದೇಶದ ನಕ್ಷೆ ತಯಾರಿಸುವ ಕೆಲಸ ಹಾಗೂ ಸಂಬಂಧಪಟ್ಟ ಇಲಾಖೆಗಳಿಂದ ದತ್ತಾಂಶ ಸಂಗ್ರಹಣೆ ಕಾರ್ಯ ಹಾಗೂ ಮೂಲ ನಕ್ಷೆಯನ್ನು ಕಾಲೋಚಿತಗೊಳಿಸುವ ಸಂಬಂಧ ಹಾಲಿ ಭೂ ಉಪಯೋಗ ಸಮೀಕ್ಷೆ [Existing land use] ಕಾರ್ಯ ಪ್ರಗತಿಯಲ್ಲಿರುತ್ತದೆ.

### 3.2 ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಅಡಿಯಲ್ಲಿನ ವರದಿಯ ಅವಧಿಯಲ್ಲಿ ಅನುಷ್ಠಾನ ಕಾರ್ಯಗಳು:-

- ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಮೂಲಕ ಸರ್ಕಾರಕ್ಕೆ ಸಲ್ಲಿಸಲಾಗಿರುವ ಭೂ ಉಪಯೋಗ ಪ್ರಸ್ತಾವನೆಗಳು 09 ಪ್ರಕರಣಗಳು
- ಭೂ ಕಂದಾಯ ಕಾಯ್ದೆ ಅಡಿಯಲ್ಲಿ ಭೂಪರಿವರ್ತನೆಗಾಗಿ ಜಿಲ್ಲಾಧಿಕಾರಿಗಳು ರವರಿಗೆ ನೀಡಿರುವ ಭೂ ಉಪಯೋಗ ಅಭಿಪ್ರಾಯಗಳು, 149 ಪ್ರಕರಣಗಳು
- ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 (2ಎ) ರ ಅಡಿಯಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ಅನುಮೋದನೆಗಳು 01 ಪ್ರಕರಣಗಳು
- ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 (2ಬಿ) ರ ಅಡಿಯಲ್ಲಿ ಅಂತಿಮ ವಸತಿ ವಿನ್ಯಾಸ ಅನುಮೋದನೆಗಳು 01 ಪ್ರಕರಣಗಳು
- ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 15 ರ ಅಡಿಯಲ್ಲಿ ಕಟ್ಟಡ ನಿರ್ಮಾಣಕ್ಕೆ ನೀಡಲಾಗಿರುವ ಪ್ರಾರಂಭಿಕ ಪ್ರಮಾಣ ಪತ್ರಗಳು 87 ಪ್ರಕರಣಗಳು.
- 2020-21 ನೇ ಸಾಲಿನ ದಿನಾಂಕ: 01-04-2020 ರಿಂದ 31-03-2021 ರ ಅವಧಿಯಲ್ಲಿ ನಡೆದ ಯೋಜನಾ ಪ್ರಾಧಿಕಾರದ ಸಮಿತಿ ಸಭೆಗಳು - 04

**3.3 ಮಾಹಿತಿ ಹಕ್ಕು ಕಾಯ್ದೆ ಸ್ಥಿತಿ ವರದಿ.**

ಈ ವರದಿಯ ಅವಧಿಯಲ್ಲಿ ಈ ಕೆಳಕಂಡ ಅಧಿಕಾರಿಗಳು ಮಾಹಿತಿ ಹಕ್ಕು ಕಾಯ್ದೆಯಡಿ ಮೇಲ್ಮನವಿ ಪ್ರಾಧಿಕಾರ ಮತ್ತು ಸಾರ್ವಜನಿಕ ಮಾಹಿತಿ ಅಧಿಕಾರಿಗಳಾಗಿ ಕಾರ್ಯ ನಿರ್ವಹಿಸುತ್ತಿರುತ್ತಾರೆ.

| ಕ್ರ.ಸಂ. | ಕಲಂ 5(1) ರ ಅಡಿಯಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿ | ಕಲಂ 19(1) ರ ಅಡಿಯಲ್ಲಿ ಮೇಲ್ಮನವಿ ಅಧಿಕಾರಿ |
|---|---|---|
| 1. | ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು | ನಗರ ಮತ್ತು ಗ್ರಾಮಾಂತರ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು |

ಈ ವರದಿಯ [ದಿನಾಂಕ: 01-04-2020 ರಿಂದ 31-03-2021 ರವರೆಗೆ] ಅವಧಿಯಲ್ಲಿ ಮಾಹಿತಿ ಹಕ್ಕು ಕಾಯ್ದೆ ಅಡಿಯಲ್ಲಿ ಒಟ್ಟು 40 ಅರ್ಜಿಗಳು ಸ್ವೀಕೃತವಾಗಿದ್ದು, ಅವುಗಳಲ್ಲಿ 16 ಪ್ರಥಮ ಮೇಲ್ಮನವಿಗಳು ಸ್ವೀಕೃತವಾಗಿದ್ದು, ಎಲ್ಲಾ ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. ವರದಿ ಅವಧಿ ಅಂತ್ಯದಲ್ಲಿ ಯಾವುದೇ ಅರ್ಜಿಗಳು ಬಾಕಿ ಇರುವುದಿಲ್ಲ.

***4. ಸಂಪನ್ಮೂಲಗಳ ಕ್ರೋಢೀಕರಣ:- ಬೇಡಿಕೆ, ವಸೂಲಿ ಮತ್ತು ಬಾಕಿ ಪಟ್ಟಿ (ಡಿ.ಸಿ.ಬಿ) ಅನ್ವಯಿಸುವುದಿಲ್ಲ.***

**4.1** ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದಲ್ಲಿ 2020-21 ನೇ ಸಾಲಿನಲ್ಲಿ ದಿನಾಂಕ: 01-04-2020 ರಿಂದ 31-03-2021 ರವರೆಗಿನ ಅವಧಿಯಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 18 ರ ಅಡಿಯಲ್ಲಿ ಸಂಗ್ರಹವಾಗಿರುವ ಶುಲ್ಕಗಳ ವಿವರಗಳನ್ನು ಪ್ರತ್ಯೇಕವಾಗಿ ಅನುಬಂಧ – 1 ರಲ್ಲಿ ಲಗತ್ತಿಸಿದೆ.

**4.2 ಯೋಜನಾ ಪ್ರಾಧಿಕಾರದ 2020-21 ನೇ ಸಾಲಿನ ಆಯ-ವ್ಯಯ:-**

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದ 2020-21 ನೇ ಸಾಲಿನ ಆಯ-ವ್ಯಯ ಪಟ್ಟಿಯನ್ನು ಜಿಲ್ಲಾಧಿಕಾರಿಗಳು ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಪತ್ರ ಸಂಖ್ಯೆ: ಎಸಿಟಿಸಿಅ /29/2020-21 ದಿನಾಂಕ: 11-11-2020 ರಂದು 2020-21 ನೇ ಸಾಲಿನ ಪರಿಷ್ಕೃತ ಅಂದಾಜು ಆಯ-ವ್ಯಯವನ್ನು ಅನುಮೋದನೆ ನೀಡಲಾಗಿರುತ್ತದೆ. ಅನುಮೋದಿತ ಆಯ-ವ್ಯಯದ ಸ್ಥೂಲ ವಿವರಗಳನ್ನು ಅನುಬಂಧದಲ್ಲಿ ಪ್ರತ್ಯೇಕವಾಗಿ ಲಗತ್ತಿಸಿದೆ. (ಅನುಬಂಧ-3)

***5. 2020-21 ರ ವೆಚ್ಚ :-***

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದಲ್ಲಿ 2020-21 ನೇ ಸಾಲಿನಲ್ಲಿ ದಿನಾಂಕ: 01/04/2020 ರಿಂದ 31/03/2021 ರವರೆಗೆ ಭರಿಸಿರುವ ವಿವಿಧ ವೆಚ್ಚಗಳ ವಿವರವನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ. (ಅನುಬಂಧ – 2)

***6. ಭೌತಿಕ ಪ್ರಗತಿ:***

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದಲ್ಲಿ 2020-21 ನೇ ಸಾಲಿನಲ್ಲಿ ದಿನಾಂಕ: 01-04-2020 ರಿಂದ 31-03-2021 ರವರೆಗೆ ಅಭಿವೃದ್ಧಿ ಕಾಮಗಾರಿಗಳನ್ನು [Civil Works] ಕೈಗೊಂಡಿರುವುದಿಲ್ಲ.

*<u>7. ಕಲ್ಯಾಣ ಕಾರ್ಯಕ್ರಮಗಳು :</u>* ಯೋಜನಾ ಪ್ರಾಧಿಕಾರದಲ್ಲಿ ಕಲ್ಯಾಣ ಕಾರ್ಯಕ್ರಮಗಳಿರುವುದಿಲ್ಲ.

*<u>8. ವಿಶೇಷ ಸಾಧನೆ ಮತ್ತು ಪ್ರಶಸ್ತಿಗಳು:-</u>* ಇರುವುದಿಲ್ಲ.

*<u>9. 2020-21 ನೇ ಸಾಲಿನ ಗುರಿಗಳು</u>*

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ **'ಮಹಾಯೋಜನೆ'** ತಯಾರಿಸುವ ಹಾಗೂ ಪ್ರಾಧಿಕಾರದ ಸ್ವಂತ ಕಟ್ಟಡ ನಿರ್ಮಿಸುವ ಮತ್ತು ದೊಡ್ಡಬಳ್ಳಾಪುರ ಸ್ಥಳೀಯ ಯೋಜನಾ ಪ್ರದೇಶದ ಆಯ್ದ ಕೆರೆಗಳ ಪುನರುಜ್ಜೀವನ ಕಾರ್ಯ ಕೈಗೊಳ್ಳುವ ಗುರಿ ಹೊಂದಲಾಗಿದೆ.

**ಸದಸ್ಯ ಕಾರ್ಯದರ್ಶಿಗಳು,**
ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ,
ದೊಡ್ಡಬಳ್ಳಾಪುರ.

## ಅನುಬಂಧ –I

## 01–04–2020 ರಿಂದ 31–03–2021 ರವರೆಗಿನ ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದ ಸ್ವೀಕೃತಿ ವಿವರಗಳು

| ಕ್ರ.ಸಂ | ವಿವರಗಳು | ಒಟ್ಟು |
|---|---|---|
| 1. | ಉತ್ತಮತೆಯ ಶುಲ್ಕ | 2,62,65,660–00 |
| 2. | ಪರಿಶೀಲನಾ ಶುಲ್ಕ | 1,00,115–00 |
| 3. | ಉಸ್ತುವಾರಿ ಶುಲ್ಕ | 1,85,800–00 |
| 4. | ಹೆಚ್ಚುವರಿ ಪ್ರತಿ ಶುಲ್ಕ | 2,800–00 |
| 5. | ಪ್ರಕಟಣಾ ಶುಲ್ಕ | 4,23,600–00 |
| 6. | ಭದ್ರತಾ ಠೇವಣಿ ಶುಲ್ಕ | 8,78,810–00 |
| 7. | ಕೆರೆ ಸಂರಕ್ಷಣಾ ಶುಲ್ಕ | 77,02,750–00 |
| 8. | ಇತರೆ ಶುಲ್ಕ | 3,032–00 |
| 9. | ನವೀಕರಣ ಶುಲ್ಕ | 1,28,000–00 |
| 10. | ಆರ್.ಟಿ.ಐ. ಶುಲ್ಕ | 750–00 |
| 11. | ನೀರು ಸರಬರಾಜು ಯೋಜನೆ ಸೆಸ್ | 27,39,504–00 |
| 12. | ವರ್ತುಲ ರಸ್ತೆ ನಿರ್ಮಾಣದ ಸರ್‌ಚಾರ್ಜ್ | 27,39,504–00 |
| 13. | ಕೊಳಗೇರಿ ಅಭಿವೃದ್ಧಿ ಸೆಸ್ | 13,69,777–00 |
| 14. | ಎಂ.ಆರ್.ಟಿ.ಎಸ್. ಸರ್‌ಚಾರ್ಜ್ | 68,43,760–00 |
| 15. | ಉಳಿತಾಯ ಖಾತೆ ಬಡ್ಡಿ ಮೊತ್ತ | 4,07,572–00 |
| | ಒಟ್ಟು | **4,97,91,434–00** |

ಸದಸ್ಯ ಕಾರ್ಯದರ್ಶಿಗಳು,
ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ,
ದೊಡ್ಡಬಳ್ಳಾಪುರ.

# ಅನುಬಂಧ -II

## ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದ ದಿನಾಂಕ: 01-04-2020 ರಿಂದ 31-03-2021 ರವರೆಗಿನ ವೆಚ್ಚಗಳು

| ಕ್ರ ಸಂ. | ವಿವರಗಳು | ಒಟ್ಟು |
|---|---|---|
| 1. | ಅಧಿಕಾರಿ ಮತ್ತು ಸಿಬ್ಬಂದಿ ವೇತನ | 12,90,331-00 |
| 2. | ಹೊರಗುತ್ತಿಗೆ ಸಿಬ್ಬಂದಿ ವೇತನ | 16,75,670-00 |
| 3. | ಕಟ್ಟಡದ ಬಾಡಿಗೆ, ಪಾರ್ಟಿಷನ್ ವೆಚ್ಚ | 7,74,587-00 |
| 4. | ವಾಹನ ಬಾಡಿಗೆ | 10,24,507-00 |
| 5. | ಪ್ರಕಟಣಾ ವೆಚ್ಚ | 8,85,846-00 |
| 6. | ಪೀಠೋಪಕರಣಗಳ ವೆಚ್ಚ | 2,22,620-00 |
| 7. | ಲೇಖನ/ ರೇಖನಾ ಸಾಮಗ್ರಿಗಳ ವೆಚ್ಚ | 1,50,780-00 |
| 8. | ಕಂಪ್ಯೂಟರ್ ಮತ್ತು ಪ್ರಿಂಟರ್ TV (Monitor) ಖರೀದಿ ವೆಚ್ಚ, UPS ಖರೀದಿ ವೆಚ್ಚ ಮತ್ತು ವೆಬ್‌ಕ್ಯಾಮೆರಾ ವೆಚ್ಚ | 1,61,446-00 |
| 9. | ನಿಗದಿತ ಠೇವಣಿ | 1,94,00,000-00 |
| 10. | ವೇತನ ಕಟಾವಣೆಗಳು, KGID, EGIS, GPF | 3,52,560-00 |
| 11. | ಮುಖ್ಯಮಂತ್ರಿ ಪರಿಹಾರ ನಿಧಿ ಕೋವಿಡ್-19 | 50,04,781-00 |
| 12. | ಟೆಲಿಫೋನ್ ಬಿಲ್, ಸ್ಟಾಂಪ್ ಖರೀದಿ, ವಿದ್ಯುತ್ ಬಿಲ್, ಇಂಟರ್‌ನೆಟ್ ವೆಚ್ಚ, ಜೆರಾಕ್ಸ್ ವೆಚ್ಚ, ಕಛೇರಿ ಸ್ವಚ್ಛಕಿ ವೇತನ | 1,65,478-00 |
| 13. | TDS | 2,15,030-00 |
| 14. | RTI ಶುಲ್ಕ | 2,492-00 |
| 15. | ವಕೀಲರ ಸಂಭಾವನೆ | 7,800-00 |
| 16. | ಇತರೆ Miscellaneous | 70,710-00 |
| 17. | GST ವೆಚ್ಚ | 61,316-00 |
| 18. | ಕರ್ನಾಟಕ ರಾಜ್ಯ ನಗರ ಯೋಜನಾ ಮಂಡಳಿಗೆ ಉತ್ತಮತ ಶುಲ್ಕದಲ್ಲಿ ಶೇ. 5 ರಷ್ಟು ಪಾವತಿಸಿರುವ ಮೊತ್ತ | 23,47,882-00 |
| 19. | ಮೂಲನಕ್ಷೆ ಕಾಲೋಚಿತಗೊಳಿಸುವ ಬಾಬ್ತು ಮತ್ತು ರಸ್ತೆ ಪರಿಚಲನ ನಕ್ಷೆ ತಯಾರಿಕೆ ಸಂಬಂಧ ಪಾವತಿಸಲಾದ ಮೊತ್ತ | 1,84,238-00 |
| 20. | ಅಧ್ಯಕ್ಷರ ಗೌರವಧನ, ಮನೆ ಬಾಡಿಗೆ ಭತ್ಯೆ ಮತ್ತು ಸದಸ್ಯರುಗಳ ಗೌರವಧನ | 2,26,450-00 |
| 21. | ವೆಬ್‌ಸೈಟ್ ರಿಚಾರ್ಜ್ ವೆಚ್ಚ | 19,659-00 |
| 22. | 2019-20ನೇ ಸಾಲಿನ ವಾರ್ಷಿಕ ವರದಿ ಮತ್ತು 2018-19 ನೇ ಸಾಲಿನ ಆಡಿಟ್ ವರದಿಗಳನ್ನು ಮುದ್ರಿಸಿದ ವೆಚ್ಚ | 21,200-00 |
| 23. | ದೊಡ್ಡಬಳ್ಳಾಪುರ ಸ್ಥಳೀಯ ಯೋಜನಾ ಪ್ರದೇಶ ವ್ಯಾಪ್ತಿಯ ಗ್ರಾಮನಕ್ಷೆ ಶುಲ್ಕ | 88,000-00 |
| 24. | ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದ ಕಛೇರಿ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ವಿನ್ಯಾಸ ಹಾಗೂ ಅಂದಾಜು ಪಟ್ಟಿಗಳ ತಾಂತ್ರಿಕ ಪರಿಶೀಲನೆಗೆ PWD ರವರಿಗೆ ಪಾವತಿಸಿರುವ ಮೊತ್ತ | 1,89,110-00 |
| 25. | Audit ಶುಲ್ಕ | 1,79,655-00 |
| 26. | ವೃತ್ತಿತೆರಿಗೆ (PT) | 8,603-00 |
| 27. | GST & PT Registration ವೆಚ್ಚ | 11,800-00 |
| 28. | Geo Referenced ಸ್ಥಳೀಯ ಯೋಜನಾ ನಕ್ಷೆಯನ್ನು ಸಿದ್ಧಪಡಿಸುವ ವೆಚ್ಚ | 92,820-00 |
| | ಒಟ್ಟು | **3,48,35,371-00** |

ಸದಸ್ಯ ಕಾರ್ಯದರ್ಶಿಗಳು,
ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ,
ದೊಡ್ಡಬಳ್ಳಾಪುರ.

ಅನುಬಂಧ - III

## 2020–21 ರ ಆರ್ಥಿಕ ವರ್ಷಕ್ಕೆ ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರದ ಆಯವ್ಯಯದ ನಿರೀಕ್ಷಿತ ಆದಾಯ ಮತ್ತು ನಿರೀಕ್ಷಿತ ವೆಚ್ಚದ ವಿವರಗಳು

| ಕ್ರ.ಸಂ. | ರಸೀದಿ | ಮೊತ್ತ | ಕ್ರ.ಸಂ. | ವೆಚ್ಚದ ವಿವರ | ಮೊತ್ತ |
|---|---|---|---|---|---|
| 1 | ನಿಶ್ಚಿತ ಠೇವಣಿಯ ಪಕ್ವತೆಯ ಬಾಬ್ತು | 40000000 | 1 | ಸಿಬ್ಬಂದಿ ವೇತನ, ಭತ್ಯೆಗಳು, ನಿವೃತ್ತಿ ವೇತನ ದೇಣಿಗೆ ಮತ್ತು | 3000000 |
| 2 | ಉತ್ತಮತೆ ಶುಲ್ಕ | 20000000 | 2 | ಹೊರಗುತ್ತಿಗೆ ವಾಹನಗಳ ಬಾಡಿಗೆ ಪಾವತಿ ಹಾಗೂ ಇತರೆ | 1500000 |
| 3 | ಎ)ಕಟ್ಟಡ ನಕ್ಷೆ ಅನುಮೋದನೆ ಶುಲ್ಕ | | 3 | ಹೊರಗುತ್ತಿಗೆ ನೌಕರರ ವೇತನ | 2000000 |
| 4 | ಎಂ.ಆರ್.ಟಿ.ಎಸ್ ಕರ | 1500000 | 4 | ಸಿಬ್ಬಂದಿಗಳ ವೇತನ ಕಟಾವಣೆ (ಕೆಜಿಐಡಿ, ಕೆ.ಜಿ.ಇ.ಎಸ್, ಎಲ್.ಐ.ಸಿ ಮತ್ತು ಜಿ.ಪಿ.ಎಫ್) | 600000 |
| 5 | ನೀರು ಸರಬರಾಜು ಯೋಜನೆ ಕರ | 900000 | 5 | ಪೀಠೋಪಕರಣಗಳ ವೆಚ್ಚ | 1500000 |
| 6 | ವರ್ತುಲ ರಸ್ತೆ ಕರ | 900000 | 6 | ವಾಹನಗಳ ವೆಚ್ಚ (ದುರಸ್ಥಿ, ಇಂಧನ ವೆಚ್ಚ, ಸರ್ವಿಸ್ ಮತ್ತು ಇನ್ಸುರೆನ್ಸ್ ಇತರೆ_) | 500000 |
| 7 | ಇಂಪ್ರೂವಿಂಗ್ ಸ್ಲಂ ಕರ | 800000 | 7 | ಕಛೇರಿ ಬಾಡಿಗೆ, ಪಾರ್ಟಿಷನ್, ಮೈನರ್ ಸಿವಿಲ್ ವರ್ಕ್ಸ್ | 1000000 |
| 8 | ಬಿ) ಅರ್ಜಿಗಳ ಮಾರಾಟ ಶುಲ್ಕ | 0 | 8 | ಲೆಕ್ಕ ಪರಿಶೋಧನಾ ಶುಲ್ಕ ಪಾವತಿ | 300000 |
| 9 | ಸಿ) ಎಸ್.ಟಿ.ಪಿ. ಭದ್ರತಾ ಠೇವಣಿ ಶುಲ್ಕ | | 9 | ಜಿಎಸ್‌ಟಿ | 150000 |
| 10 | ಡಿ) ಕಟ್ಟಡ ನಕ್ಷೆ ಅನುಮೋದನೆ ಸಂಭಂಧ ಭದ್ರತಾ ಠೇವಣಿ ಶುಲ್ಕ | 10000000 | 10 | ವಕೀಲರ ಶುಲ್ಕ ಮತ್ತು ಆದಾಯ ತೆರಿಗೆ ಶುಲ್ಕ | 300000 |
| 11 | ಬ್ಯಾಂಕ್ ಬಡ್ಡಿ ಮತ್ತು ನಿಶ್ಚಿತ ಠೇವಣಿ ಮೇಲಿನ ಬಡ್ಡಿ ಬಾಬ್ತು | 4000000 | 11 | ನಗರ ಮತ್ತು ಗ್ರಾಮಾಂತರ ಯೋಜನಾ ಮಂಡಳಿಗೆ ಪಾವತಿಸಿರುವ 5% ವಂತಿಕೆ ಬಾಬ್ತು | 2500000 |
| 12 | ಕೆರೆಗಳ ಪುನಶ್ಚೇತನ ಶುಲ್ಕ | 10000000 | 12 | ಆದಾಯ ತೆರಿಗೆ | 500000 |
| 13 | ದಿನಪತ್ರಿಕೆಯ ಪ್ರಕಟಣೆ ಶುಲ್ಕ | 1000000 | 13 | ಎ) ಲೇಖನ ಮತ್ತು ರೇಖನ ಸಾಮಾಗ್ರಿ ಖರೀದಿ ವೆಚ್ಚ | 200000 |
| 14 | ಮಹಾಯೋಜನೆ ನಕ್ಷೆ ಮತ್ತು ವಲಯ ನಿಯಮಾವಳಿ ಪುಸ್ತಕ ಮಾರಾಟ ಶುಲ್ಕ | 30000 | 14 | ಬಿ) ಮುದ್ರಣಾ ಹಾಗೂ ಸರ್ಟಿಫೈಡ್‌ಪ್ರತಿಗಳ ವೆಚ್ಚ | 200000 |
| 15 | ವಿನ್ಯಾಸ ನವೀಕರಣ ಶುಲ್ಕ | 50000 | 15 | ಸಿ) ಮಹಾಯೋಜನೆ ನಕೆ ತಯಾರಿಕೆ ವೆಚ್ಚ | 20000000 |
| 16 | 5ವರ್ಷಗಳ ನಂತರದಲ್ಲಿ ಸೈಟುಗಳ ಬಿಡುಗಡೆಗೆ ದಂಡ ವಸೂಲಿ ಶುಲ್ಕ | 1000000 | 16 | ಡಿ) ಹೊಸ ವಾಹನ ಖರೀದಿ | 2500000 |
| 17 | ದೃಢೀಕೃತ ನಕಲು ಪ್ರತಿ ಶುಲ್ಕ | 50000 | 17 | ಇ) ಅಭಿವೃದ್ಧಿ ಕಾಮಗಾರಿಗಳು (ಅನುಮೋದನೆಗೊಂಡ ಅಭಿವೃದ್ಧಿ ಕಾಮಗಾರಿಗಳಿಗೆ ಪಾವತಿಸಬೇಕಾದ ಬಾಕಿ ಮೊತ್ತ) | 0 |
| 18 | ಪರಿಶೀಲನಾ ಶುಲ್ಕ | 200000 | 18 | ಎಫ್) ವೆಬ್‌ಸೈಟ್ ನಿರ್ವಹಣೆ ಮತ್ತು ನವೀಕರಣ | 50000 |
| 19 | ಮಾಹಿತಿ ಹಕ್ಕು ಅಧಿನಿಯಮದಡಿ ಪಾವತಿಸಿಕೊಳ್ಳಬಹುದಾದ ಶುಲ್ಕ | 30000 | 19 | ಪತ್ರಿಕಾ ಪ್ರಕಟಣೆ ವೆಚ್ಚ | 1000000 |
| 20 | ಸೂಪರ್ ವಿಷನ್ ಛಾರ್ಜಸ್ | 200000 | 20 | ಭದ್ರತಾ ಠೇವಣಿ ಮರುಪಾವತಿ (ಬಿಲ್ಡಿಂಗ್ ಪ್ಲಾನ್) | 2500000 |
| 21 | ರಸ್ತೆ ಶುಲ್ಕ | | 21 | ಕಛೇರಿ ಇತರೆ ವೆಚ್ಚಗಳು (ಪ್ರಿಂಟಿಂಗ್ ಛಾರ್ಜಸ್, ಅಂಚೆ ಚೀಟಿ, ಸಭೆಯ ವೆಚ್ಚ, ಕಛೇರಿ ನವೀಕರಣ, ದೂರವಾಣಿ, ವಿದ್ಯುತ್ ಬಿಲ್ ಜೆರಾಕ್ಸ್, ನೇಮ್‌ಬೋರ್ಡ್, ಕ್ಲೀನಿಂಗ್, ನೋಟಿಸ್ ಬೋರ್ಡ್ ಇತರೆ...) | 1000000 |
| 22 | ಇತರೆ ಶುಲ್ಕ | 0 | 22 | ಕಛೇರಿಯ ಕೈ ಹಣ ಹಾಗೂ ಇತರೆ ವೆಚ್ಚ | 200000 |
| | | | 23 | ಕಛೇರಿಗೆ ಕಂಕ್ಯೂಟರ್, ಜೆರಾಕ್ಸ್ ಮೆಷಿನ್, ಯುಪಿಎಸ್, ಪ್ರಿಂಟರ್ ಖರೀದಿ ವೆಚ್ಚ ಹಾಗೂ ವಾರ್ಷಿಕ ನಿರ್ವಹಣೆ ವೆಚ್ಚ | 1000000 |
| | | | 24 | ಮುಖ್ಯ ಮಂತ್ರಿಗಳ ಪರಿಹಾರ ನಿಧಿ | 10000000 |
| | | | 25 | ಗ್ರಾಮ ನಕ್ಷೆ ಹಾಗೂ ಉಪನಗರ ನಕ್ಷೆಗಳ ವಿದ್ಯುನ್ಮಾನ ಪ್ರತಿ ಖರೀದಿ ವೆಚ್ಚ | 1000000 |
| | | | 26 | ಅಧ್ಯಕ್ಷರ ಮನೆ ಬಾಡಿಗೆ, ಗೌರವ ಧನ ಮತ್ತು ಇತರೆ ವೆಚ್ಚ | 700000 |
| | | | 27 | ಎಂ.ಆರ್.ಟಿ.ಎಸ್. ಅಧಿಕ ಕರ ಮರುಪಾವತಿ | 1425000 |
| | | | 28 | ನೀರು ಸರಬರಾಜು ಯೋಜನೆ ಕರ ಮರುಪಾವತಿ | 855000 |
| | | | 29 | ಇಂಪ್ರೂವಿಂಗ್ ಸ್ಲಂ ಕರ ಮರುಪಾವತಿ | 760000 |
| | | | 30 | ಎಸ್.ಟಿ.ಪಿ. ಶುಲ್ಕದ ಮರುಪಾವತಿ | |
| | | | 31 | ನಗರಾಭಿವೃದ್ಧಿ ಸ್ಕೀಂಗಳು | 6600000 |

| | | | | | |
|---|---|---|---|---|---|
| | | | 32 | ಉದ್ಯಾನವನಕ್ಕಾಗಿ ಮೀಸಲಿಟ್ಟಿರುವ ಪ್ರದೇಶಗಳ ಭೂ ಸ್ವಾಧೀನಪಡಿಸಿಕೊಳ್ಳಲು ಮೀಸಲಿಟ್ಟಿರುವ ಬಾಬ್ತು | 6600000 |
| | | | 33 | ಪ್ರಾಧಿಕಾರದ ಕಛೇರಿ ಕಟ್ಟಡ ನಿರ್ಮಿಸಲು ಮೀಸಲಿಟ್ಟಿರುವ ಬಾಬ್ತು | 20000000 |
| | | | 34 | ಕೆರೆಗಳ ಪುನಶ್ಚೇತನಕ್ಕಾಗಿ ಮೀಸಲಿಟ್ಟಿರುವ ಬಾಬ್ತು | 15000000 |
| | | | 35 | ನಿಶ್ಚಿತ ಠೇವಣಿಯ ಹೂಡಿಕೆ ಬಾಬ್ತು | 10000000 |
| | **ಒಟ್ಟು** | **90660000** | | **ಒಟ್ಟು** | **115440000** |
| | **ಆರಂಭಿಕ ಶಿಲ್ಕು** | 29909916 | | ಅಂತಿಮ ಶಿಲ್ಕು | 5127916 |
| | **ಒಟ್ಟಾರೆ ಮೊತ್ತ** | **120569916** | | **ಒಟ್ಟಾರೆ ಮೊತ್ತ** | **120567916** |

ಸದಸ್ಯ ಕಾರ್ಯದರ್ಶಿಗಳು
ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ
ದೊಡ್ಡಬಳ್ಳಾಪುರ.

# DODDABALLAPURA PLANNING AUTHORITY

## ANNUAL REPORT 2020-21

### (Period from 01-04-2020 to 31-03-2021)

1. **Introduction:**

The Doddaballapura Planning Authority is working under the administrative control of the Government and it is a statutory body constituted by the Government. The Planning Authority was started functioning form 11.05.2018 in the office of the BMRDA, No.1, Ali Askar Road, Bengaluru. At present from 05-09-2019 office shifted to First Floor, S.S. Complex, Opposite to City Police Station, 'D' Cross, Doddaballapura. The Chairman is the Head of the Authority and the officer of the cadre of Joint Director of Town & Country Planning working as Member – Secretary of the Authority and chief executive officer of the Authority.

**Objective & Functions of the Planning Authority.**

The Planning Authority is to provide for the regulation of planned growth of land use and development. The preparation of vision document in the form of Master Plan Preparation and execution of town planning schemes within the Local Planning Area.

1. To create conditions favorable for planning and replanning of the urban and rural areas in the Local Planning Area, with a view to providing full civic and social amenities for the people in the Local Planning Area.
2. To stop uncontrolled development of land due to land speculation and profiteering in land.
3. To preserve and improve existing recreational facilities and other amenities contributing towards balanced use of land; and
4. To direct the future growth of populated areas in the local Planning Area, with a view to ensuring desirable standards of environmental health and hygiene and creating facilities for the orderly growth of industry and commerce, thereby promoting general standards of living in the Local Planning Area.

## 2. Composition of the Planning Authority:

The Doddaballapura Planning Authority has been constituted vide Government Notification No: NaAaE-95-BMR-2016 dated: 20.03.2018, under section 4(c) of the Karnataka Town & Country Planning Act, 1961. The Government in Notification No: NaAaE-95-BMR-2016 dated: 20.03.2018 has appointed the Metropolitan Commissioner, Bangalore Metropolitan Region Development Authority, Bangalore as the Chairman of the Authority and Joint Director of Town & Country Planning as the Member-Secretary and Municipal Commissioner, CMC, Doddaballapura has been appointed as the Member of the Authority.

Sri D.S. Jayanna S/o M. Sanjeevaiah, Yelahanka Taluk, Hesaraghatta Hobali, Singanayakahalli Gramapanchyath Dibburu Village has been appointed as President of Doddaballapura Planning Authority vide notification No. UDD 20 BMR 2020 dated: 11-03-2021. Accordingly assume the charge on dated: 13-03-2020 as the president of the Doddaballapura Planning authority. and Sri Ananda Murthy S/o Late|| A.V. Ramaiah, Madhure Hobali, Madhure Village, Doddaballpura Taluk And Sri S.K. Ramesh S/o S.G. Krishnamurthy, Karenahalli Village, Ward No. 30, Doddaballapura Town and Smt. Vatsalala have been appointed as the Members of the Doddaballapura Planning Authority in various notifications. The Member –Secretary being the Chief Executive Officer of the authority.

The following Temporary post have been are sanctioned for Doddaballapura planning authority vide Govt. order No. NaAaE-44-BMR-2018 dated: 20-06-2019.

| Sl. No. | Posts | Scale of Pay | No; of posts Temporarily Sanctioned | Mode of appointment |
|---|---|---|---|---|
| 1 | Assistant Director Town and County Planning | 52650-97100 | 01 | On Deputation |
| 2 | Town Planner | 43100-83900 | 01 | |
| 3 | First Division Assistant | 27650-52650 | 01 | |
| 4 | Second Division Assistant | 21400-42000 | 01 | |
| 5 | Typist | | 01 | Outsource |
| 6 | 'D' Group | | 01 | Outsource |
| | Total | | **06** | |

As per the above SI.No. (1) & (2) are working on Deputation and remaining are working on outsource basis in the authority.

Doddaballapura Local Planning Area Covered vast area of 772.77 Sq.k.mtrs. For that preparation of Master Plan and in order to execute the technical and administrative work effectively, it is necessary to create additional posts for the authority. Hence the proposal for the creation of below posts has been sent to government through BMRDA vide authority letter No. ದೊಯೋಪ್ರಾ/ಟಿಪಿ/ಹುದ್ದೆಗಳು/23/2018-19/580 ದಿನಾಂಕ: 01-12-2020.


| Sl. No. | Posts | Scale of Pay | No; of posts Temporarily to be crated |
|---|---|---|---|
| 1 | Deputy Director Town and County Planning | 67550-04600 | 01 |
| 2 | Town Planner | 43100-83900 | 01 |
| 3 | Assistant Town Planner | 33450-62600 | 01 |
| 4 | Typist | | 01 |
| 5 | 'D' Group | | 01 |
| | Total | | **05** |

## 2.1. Jurisdiction – Local Planning Area

In view of the need for systematic Planning and to control and regulate the developments in and around Doddaballapura city, the Karnataka State Government intends to create Doddaballapura Local Planning Area. For this purpose 257 villages of BIAAPA vic., Bangalore Rural District, Doddaballapura Taluk, Kasaba Hobli, Doddabelavangala, Sasalu, Madure and Bangalore Urban District, Bangalore North Taluk, Hesargahatta Hobli and 37 villages from Nelamangala Local Planning Area, Bangalore Rural District, Doddaballapura Taluk Madure Hobli, Total 294 villages were taken away from the jurisdiction of BIAAPA and Nelamangala Planning Authority as per Section 4(B) of Karnataka Town & Country Planning Act, 1961, vide Government Notification No: NaAaE/95/BMR/2016 dated: 30.11.2017.

The Doddaballapura Local Planning Area has been declared with 294 villages in Government Notification – II, bearing No: NaAaE-95-BMR-2016 Dated: 30.11.2017. The area covered in the Local Planning Area is 77,277 Ha (772.77 sq. kms).

## Details of Doddaballapura Local Planning Area:



The villages/towns included in the Doddaballapur Planning Area are as under:

| SL.NO | VILLAGES/TOWNS | Numbers/Extent |
|---|---|---|
| **Bangalore Rural District –Doddaballapura Taluk** | | |
| 1 | Doddaballapura City Municipal Council Area | 67.00 sq.kms |
| 2 | Doddaballapura Kasaba Hobli | 54 Villages |
| 3 | Doddabelavangala Hobli | 43 Villages |
| 4 | Saasalu Hobli | 58 Villages |
| 5 | Tubagere Hobli | 67 Villages |
| 6 | Madhure Hobli | 42 Villages |
| Bangalore Urban District – Bangalore North Taluk | | |
| 1 | Hesarughatta Hobli | 29 Villages |

The Doddaballapura Local Planning Area Consists of 265 villages of Doddaballapura Taluk of Bangalore Rural District and 29 villages of Bangalore North Taluk of Bangalore urban District totally includes 294 villages in the jurisdiction. The boundary of Local Planning Area covered on North by Gowribidanur Taluk, South by Nelamangala & Bangalore North Taluk, East by Devanahalli and Chikkaballapura Taluk and West by Koratagere Taluk. The Doddaballapura city is located at a distance of 50 km from Bangalore city. The National Highway-207, the State Highway-9, 74, 94 and 39 are passing through the Local Planning Area.

## 2.2. Administrative Expenditure

Details of Expenditure of the Authority for the Year of 2020-21 is Annexed as Annexure-2.

## 2.3. Web Site:-

In order to facilitate dissemination of information to the General public about the activities of the Authority, two websites have been created as www.dbpurapa.in & www.doddballapur.tpa.gov.in and containing the following information's.

1. General Information.
2. Plan.
3. Financing.
4. Accounting.
5. Terms & Condition.
6. Government Notification.
7. Tender and Fee.
8. Technical Opinion.
9. Frequently asked questions.
10. Images.
11. Related Links.

- The annual maintenance of the above websites are done by the Karnataka Municipal Data Society & Doddaballapura Planning Authority.
- Public can send their quarries to E-mail ID – dpa.dbpura2018@gmail.com.

# 3. Work Progress:

### 3.1 Preparation of Master Plan:

As per section-9(1) of the Karnataka Town & Country Planning Act, 1961, every planning Authority has to prepare the Master Plan within 2 years from the date of declaration of Local Planning Area and submit it to the Government for provisional approval. Before carrying out a survey of the area for the purpose of preparing a Master Plan, the Planning Authority has to make a declaration of its intention to prepare such plan under section-10 of KTCP Act, 1961 and shall submit a copy of such resolution with a copy of plan showing only boundary of the entire area proposed to be included in the Master Plan to the State Government.

Accordingly subject was placed before the 3rd meeting of the Planning Authority held on 21.02.2019 and in the meeting it was resolved to publish the declaration of intention to prepare Master Plan for Doddaballapura Local Planning Area under the provisions of Section-10 of KTCP Act, 1961. As per the meeting resolution, intention of declaration under section 10 has been published and invited public suggestions within the stipulated 60 days duration under the official gazetteer volume 154, issue 20 dated: 16-05-2019.

The Authority is intended to prepare the scientific base map using GIS for preparation of Mater Plan. In this Connection Base Map of Doddballapura Local Planning Area has been collected from the Karnataka Remote Sensing and application center, Bengaluru. Further The Geo-Referencing and updating of basemap work is under progress as well as collection of data from various stake holders and Carryout the survey for identification of growth centers in the LPA and existing land use survey is under progress.

### 3.2 Details of Regulatory Work under Karnataka Town and country Planning Act.

- Change of land use proposals submitted to Government through BMRDA under Section 14 (A) Of KTCP Act - 09 No.
- Land use Opinions given for Land Conversion under Revenue Act to Deputy Commissioner. 149 No.s
- Provisional layouts approved as per provisions under 17(2A) of KTCP Act. 01 No.s
- Final Layouts approved as per provisions under section 17 (2B) of KTCP Act. 01 No.s
- Grant of Commencements Certificates issued for construction of buildings as per provisions under section 15 of KTCP Act. 87 Nos.
- 04 Numbers of Meetings were held in the authority during the year 2020-21. [Period of 01-04-2020 to 31-03-2021]

### 3.3 RTI Act- status and report

The following officers have been designated as Public information officer and Appellate Authorities, and accordingly they are performing their Duties

| Public information u/s 5(1) | Appellate Authorities u/s 19 (1) |
|---|---|
| Public information Officer and Assistant Director of Town and Country Planning, | Joint Director, Town and Country Planning & Member Secretary |

Under the RTI Act 40 no.s of application have been received and 16 appeal applications were received during the period of [From 01-04-2021 to 31-03-2021] 2020-21 and They have been disposed off; Closing balance by the end of the year is nil.

## 4. Mobilisation of Resources:

4.1 Details of Fee collected from 01/04/2020 to 31/03/2021 for year 2020-21 under section 18 Karnataka Town & Country Planning Act 1961 in DPA is enclosed in Annexure - 1.

**Demand Collection & Balance Municipal fund -** Not Applicable.

4.2 **Budget of the Authority:-**

Revised Budget of the Authority for the year 2020-21 has been approved by the Deputy Commissioner Bangalore Rural District vide no. ಎಸಿಟಿಸಿಅ/29/2020–21 ದಿನಾಂಕ: 11–11–2020 is annexed As Annexure - 3.

## 5. Expenditure for the year 2019-20

Details of Expenditure of the Authority for the Year of 2020-21 is Annexed as Annexure-2.

## 6. Physical Progress

During the year 2020-21 from 01-04-2020 to 31-03-2021there is no physical progress in the Doddaballapura Planning Authority.

**7. Progress in welfare schemes:** No welfare schemes in Planning Authority.

**8. Special Achievements / Awards:** Nil.

## 9. Target for the year-2020:

Preparation of Master Plan for the Doddaballapura Local Planning Area and to take up the rejuvenation work for the selected lakes in the Doddaballapura Local Planning area and also the Construction of Own office building for the authority.

**Joint Director of Town and Country**
**Planning and Member Secretary,**
Doddaballapura Planning Authority,
Doddaballapura.

# ANNEXUNE-I

## DODDABALLAPURA PLANNING AUTHORITY, DODDABALLAPURA

## INCOME DETAILS FROM THE YEAR OF 01-04-2020 TO 31-03-2021

| S.N | RECEIPT | AMOUNT |
|---|---|---|
| 1. | Betterment levy | 2,62,65,660–00 |
| 2. | Scrutiny Fees | 1,00,115–00 |
| 3. | Supervision charges | 1,85,800–00 |
| 4. | Fees for additional& Certified copies | 2,800–00 |
| 5. | Publication charges | 4,23,600–00 |
| 6. | Security Deposit | 8,78,810–00 |
| 7. | Fees for Rejuvenation of lakes or tanks | 77,02,750–00 |
| 8. | Other Fees | 3,032–00 |
| 9. | Renewal Fees | 1,28,000–00 |
| 10. | RTI fees | 750–00 |
| 11. | Cess for Water supply scheme | 27,39,504–00 |
| 12. | Ring Road surcharges | 27,39,504–00 |
| 13. | Slum Cess | 13,69,777–00 |
| 14. | MRTS Surcharge | 68,43,760–00 |
| 15. | Saving Bank A/c interest | 4,07,572–00 |
| **Total** | | **4,97,91,434–00** |

**Member Secretary,**
Doddaballapura Planning Authority,
Doddaballapura.

# ANNEXUNE- II

## DODDABALLAPURA PLANNING AUTHORITY, DODDABALLAPURA

### EXPENDITURE DETAILS FROM THE DATE OF 01-04-2020 TO 31-03-2021

| S.N | EXPENDITURE | AMOUNT |
|---|---|---|
| 1. | Salary of officer & staff | 12,90,331–00 |
| 2. | Outsource staff salary | 16,75,670–00 |
| 3. | Office rent, Partition work | 7,74,587–00 |
| 4. | Vehicle rent | 10,24,507–00 |
| 5. | Paper publication Charges | 8,85,846–00 |
| 6. | Furniture's Expenditure | 2,22,620–00 |
| 7. | Stationaries Expenditure | 1,50,780–00 |
| 8. | Expenditure for Purchasing of computer, Printer TV (Monitor), UPS & Web camera etc… | 1,61,446–00 |
| 9. | Fixed deposit | 1,94,00,000–00 |
| 10. | Salary Deductions KGID, EGIS, GPF | 3,52,560–00 |
| 11. | C. M. Relief fund, Covid-19 | 50,04,781–00 |
| 12. | Telephone, Stamp, Electrical, Xerox, Internet & Office cleaning and other Annual Maintenance | 1,65,478–00 |
| 13. | TDS | 2,15,030–00 |
| 14. | RTI Fees | 2,492–00 |
| 15. | Advocate Fees | 7,800–00 |
| 16. | Miscellaneous | 70,710–00 |
| 17. | GST Bill | 61,316–00 |
| 18. | 5% Contribution towards STPB | 23,47,882–00 |
| 19. | Preparation of Master Plan (Preparation of Base Map and Preparation of Road Alignment Map) existing land use survey and other related activities. | 1,84,238–00 |
| 20. | Expenditure towards Chairman (honorarium, house rent allowance & other allowances) | 2,26,450–00 |
| 21. | Website update & Renewal Charges | 19,659–00 |
| 22. | Printing charges of Annual Report of 2019-20 & Audit Report of 2018-19 of the authority | 21,200–00 |
| 23. | Village Maps | 88,000–00 |
| 24. | Payment of PWD towards technical approval of authority building plan estimate | 1,89,110–00 |
| 25. | Audit charges | 1,79,655–00 |
| 26. | Professional Tax | 8,603–00 |
| 27. | GST & PT Registration Charges | 11,800–00 |
| 28. | Expenditure towards Preparation of Geo Referenced local planning area map. | 92,820–00 |
| | **Total** | **3,48,35,371–00** |

**Member Secretary,**
Doddaballapura Planning Authority,
Doddaballapura.

ANNEXUNE-III

**DODDABALLAPURA PLANNING AUTHORITY, DODDABALLAPURA**

**Abstract Figures of the Estimated Budget For the year 2020-21**

| S.N | RECEIPT | AMOUNT | S. N | EXPENDITURE | AMOUNT |
|---|---|---|---|---|---|
| 1 | Investment Realize (Maturity) | 40000000 | 1 | Salary of Staff, pensionary contribution, Hospitality Allowances and Medical Re- imbursement. | 3000000 |
| 2 | Betterment Contribution | 20000000 | 2 | Allowance cost of conveyance or hire of vehicles etc. | 1500000 |
| 3 | a) Building Plan approval Fees | | 3 | Salary and wages of outsource staff | 2000000 |
| 4 | M.R.T.S (Mass Rapid Transport System) cess | 1500000 | 4 | Salary Deduction (KGID, KGES; LIC, GPF) | 600000 |
| 5 | water supply scheme cess | 900000 | 5 | Furniture and Curtains purchasing Expenditures | 1500000 |
| 6 | Ring road cess | 900000 | 6 | vehicle Expenditures (repair, fuel charges Services & Insurance Etc.) | 500000 |
| 7 | Imporving slums cess | 800000 | 7 | Authority Office Rent, partition and other minor civil | 1000000 |
| 8 | b)Sale of Application / Extra | 0 | 8 | Auditing Charges | 300000 |
| 9 | c) Security Deposit for S.T.P Works | | 9 | GST | 150000 |
| 10 | d) Security Deposit for Building Plan approval FeesFees | 10000000 | 10 | Legal charges and TDS filing charges | 300000 |
| 11 | Bank Interest | 4000000 | 11 | 5% Contribution towards STPB | 2500000 |
| 12 | Rejuvenation of tanks Fees | 10000000 | 12 | TDS | 500000 |
| 13 | Fee for paper notification | 1000000 | 13 | A) Purchase of Stationary and Others | 200000 |
| 14 | Sale of Master Plan & Z R | 30000 | 14 | B) Printing and Certified Copies | 200000 |
| 15 | Layout Renewal | 50000 | 15 | C) preparation of Revised Master Plan | 20000000 |
| 16 | A penalty for releasing of sites ofter 5 years | 1000000 | 16 | D) Vehicle purchase | 2500000 |
| 17 | Fee for issuing certified copies | 50000 | 17 | E) Payment to PWD and Panchayat Raj Engineering Division Bangalore Urban and Rural District for Road and other Development works (Spill over) approved by Govt 2017-18 | 0 |
| 18 | Scrutiny fee | 200000 | 18 | F) Website update & Renewal charges | 50000 |
| 19 | Rti | 30000 | 19 | Paper notification charges | 1000000 |
| 20 | Supervision charges | 200000 | 20 | Repayment of Security Deposit (Building Plan) | 2500000 |
| 21 | Road Fee | 0 | 21 | other office expenditure (Printing charges, stamp, meeting expenses, office renovation, Telephone, Electircity charges, xerox name borad, cleaning notice board | 1000000 |
| 22 | Other Fee | 0 | 22 | Other office imprest & Miscellaneous | 200000 |
| | | | 23 | Purchase of computers, xerox machine, UPS, Printer | 1000000 |
| | | | 24 | CM relief fund | 10000000 |
| | | | 25 | Village maps/ Satellite images purchase | 1000000 |
| | | | 26 | Expenditure towards Chairman (honourarium, house | 700000 |
| | | | 27 | M.R.T.S (Mass Rapid Transport System) cess | 1425000 |
| | | | 28 | water supply scheme cess Refund | 855000 |
| | | | 29 | Imporving slums cess Refund | 760000 |
| | | | 30 | Repayment of STP security Deposit | |
| | | | 31 | Town Planning Schemes | 6600000 |
| | | | 32 | Acquisition of land reserved for parks and open spaces Amount | 6600000 |
| | | | 33 | Construction of Authority building | 20000000 |
| | | | 34 | Rejuvenation of tanks | 15000000 |
| | | | 35 | Investments in Fixed Deposits | 10000000 |
| | Total | **90660000** | | **Total** | **115440000** |
| | **Opening balance** | **29907916** | | **Closing balance** | **5127916** |
| | **Grand Total** | **120567916** | | **Total** | **120567916** |

**Joint Director of Town & Country Planning & Member Secretary, Doddaballapura Planning Authority, Doddaballapura**